ಕರ್ನಾಟಕ ಸರ್ಕಾರ
GOVERNMENT OF KARNATAKA
ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590 002
ZILLA PANCHAYAT OFFICE, BELGAUM-590 002

ದೂರವಾಣಿ / Telephone: 0831-2407207, 0831-2407212
ಫ್ಯಾಕ್ಸ್/Fax: 0831-2429662
e-mail: ceo_zp_bgm@nic.in, dsadmbgm@gmail.com

ಕ್ರ.ಸಂ.:ಜಿಪಂ/ಸಿಬ್ಬಂದಿ/ವಿವ-226/2013-14 ದಿನಾಂಕ: -05-2014

1) ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ.
2) ಜಿಲ್ಲೆಯ ಎಲ್ಲಾ ತಾಲ್ಲೂಕ ಪಂಚಾಯತ, ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

## ಸುತ್ತೋಲೆ

**ವಿಷಯ:ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸಂಭಾವಣೆ ನೀಡುವ ಕುರಿತು.**

* * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಕಚೇರಿಯಲ್ಲಿ ಹಾಗೂ ನಿಮ್ಮ ಕಚೇರಿ ವ್ಯಾಪ್ತಿಯ ಅಧೀನ ಕಚೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹೊರಗುತ್ತಿಗೆ ಸಂಸ್ಥೆಗಳಿಂದ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿರುವುದು ಸರಿಯಷ್ಟೇ.

ಹೊರಗುತ್ತಿಗೆ ಸಂಸ್ಥೆಗಳಿಗೆ ಪ್ರತಿ ತಿಂಗಳು ನೀಡುತ್ತಿರುವ ಸಂಭಾವಣೆಯನ್ನು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಣದ ರೂಪದಲ್ಲಿ/ಚೆಕ್ ರೂಪದಲ್ಲಿ ನೇರವಾಗಿ ಅವರಿಗೆ ನೀಡುತ್ತಿರುವುದು ಕಂಡು ಬಂದಿರುತ್ತದೆ. ಸದರಿ ವಿಷಯದಲ್ಲಿ ಕೆಲವೊಂದು ಅಂಶಗಳನ್ನು ನಿಯಮಾನುಸಾರ ಪಾಲಿಸಬೇಕಾಗಿರುತ್ತದೆ.

1) ಕಾರ್ಮಿಕ ಇಲಾಖೆಯು ಪ್ರತಿ ವರ್ಷ ಹೊರಡಿಸುವ minimum wages ಆದೇಶದ ಪ್ರಕಾರ ಆಯಾ ಹುದ್ದೆಗೆ ತಕ್ಕಂತೆ ಖಡ್ಡಾಯವಾಗಿ ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡ ಸಿಬ್ಬಂದಿಗಳಿಗೆ ಪಾವತಿ ಮಾಡಬೇಕಾಗಿರುತ್ತದೆ.
2) ನಿಯಮಾನುಸಾರ EPF, ESI ಕಟಾವಣೆಗಳನ್ನು ಮಾಡಿ ಸಂಬಂಧಿಸಿದ ಖಾತೆಗಳಿಗೆ ಪಾವತಿಸಿರುವ ಕುರಿತು ಚೆಲನ್ ಪ್ರತಿಗಳನ್ನು ಸಿಬ್ಬಂದಿಯ ಪಟ್ಟಿಯ ವಿವರಗಳೊಂದಿಗೆ ಪ್ರತಿ ತಿಂಗಳು ಬಿಲ್ಲಗೆ ಲಗತ್ತಿಸಿ ಸಂಸ್ಥೆಯವರು ಸಲ್ಲಿಸಬೇಕು.
3) ಸಂಬಂಧಿಸಿದ ಹೊರಗುತ್ತಿಗೆ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವುದು ಹಾಗೂ ಬಿಲ್ಲದೊಂದಿಗೆ ಪ್ರತಿ ತಿಂಗಳು ಬ್ಯಾಂಕ್‌ನವರಿಂದ ದೃಢೀಕರಿಸಿ ಸಲ್ಲಿಸುವುದು.
4) ಕಾರ್ಮಿಕ ಇಲಾಖೆಯ ಮಾರ್ಗಸೂಚಿಗಳ ಪ್ರಕಾರ ಪ್ರತಿ ತಿಂಗಳು ಸರ್ವೀಸ್ ಟ್ಯಾಕ್ಸ್ ಭರಣಾ ಮಾಡಿದ ಬಗ್ಗೆ ಚಲನ ಪ್ರತಿಗಳನ್ನು ಬಿಲ್ಲ್‌ಗೆ ಲಗತ್ತಿಸುವುದು.

ಸದರಿ ವಿವರಗಳನ್ನು ಪಡೆದ ನಂತರ ಮೇಲ್ಕಂಡ ಎಲ್ಲ ಅಂಶಗಳನ್ನು ಖಚಿತಪಡಿಸಿಕೊಂಡ ನಂತರವೇ ಮುಂದಿನ ತಿಂಗಳ ಬಿಲ್ಲ ಸಂದಾಯ ಮಾಡಲು ನಿರ್ದೇಶಿಸಿಲಾಗಿದೆ.

(ದೀಪಾ ಚೋಲನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ, ಬೆಳಗಾವಿ

Z:Circulars .doc